## ಫೇಸ್‌ಬುಕ್ ಹಾಕಿ

ಆ ದಿನ ನಮ್ಮ ಮನೆ ಕೆಲಸ ಮಾಡುವ ಗೌರಮ್ಮ ಎಂದಿಗಿಂತ ಮುಂಚೆಯೇ ಬಂದಾಗ ತುಂಬಾ ಖುಷಿಯಲ್ಲಿದ್ದಳು. ಅವಳ ಮಗಳಿಗೆ ಮದುವೆ ಗೊತ್ತಾಗಿದ್ದು, ವರ ಸರ್ಕಾರಿ ನೌಕರನಾಗಿರುವುದು, ಮದುವೆ ಖರ್ಚೆಲ್ಲಾ ಗಂಡಿನ ಕಡೆಯವರೇ ಭರಿಸುವುದು ಅವಳ ಸಂತೋಷಕ್ಕೆ ಕಾರಣ. 'ಅಕ್ಕಾ, ಇನ್ನು ಹದಿನೈದು ದಿನದಲ್ಲೇ ನನ್ನ ಮಗಳ ಮದುವೆ. ಮದುವೆಗೆ ಅವಳ ಮುಖ ಹೊಳೆಯಬೇಕು ಹಾಗೆ ಫೇಸ್‌ಬುಕ್ ಹಾಕಿ' ಎಂದಳು. ನಾನು ಆಶ್ಚರ್ಯದಿಂದ 'ನಿನಗೂ ಫೇಸ್‌ಬುಕ್ ಹುಚ್ಚು ಹಿಡೀತೇನೆ?' ಎಂದೆ. 'ಅದೇ ಕಣಕ್ಕಾ ನೀವು ಮುಖಕ್ಕೆಲ್ಲಾ ಹಣ್ಣಿನ ರಸ, ಕಡ್ಲೇ ಹಿಟ್ಟು ಏನೇನೋ ಮಾಡ್ಕೊಂಡು ಮುಖ ಲಕ ಲಕ ಹೊಳೆಯೊ ಹಾಗೆ ಮಾಡ್ತಿರಲ್ಲ...' ಅಂದಳು. ಅವಳು ಹೇಳುತ್ತಿರುವುದು 'ಫೇಸ್‌ಪ್ಯಾಕ್' ಬಗ್ಗೆ ಎಂದು ತಿಳಿದಾಗ ನನಗೆ ನಗು ತಡೆಯಲಾಗಲಿಲ್ಲ.

**ಎನ್.ಪಿ. ಶೈಲಜ**



ಚಿತ್ರಗಳು: ಗಣೇಶ ಆಚಾರ್ಯ



## 2ಜಿ, 3ಜಿ ಸ್ಟೇಜ್‌ಗೆ ಬನ್ನಿ

ನಮ್ಮ ದೊಡ್ಡಮ್ಮನ ಮಗಳ ಮದುವೆಯ ನಿಶ್ಚಿತಾರ್ಥ ಕಾರ್ಯಕ್ರಮ ನಡೆದಿತ್ತು. ನಮ್ಮ ದೊಡ್ಡಮ್ಮನ ಸೊಸೆಗೆ ಹೆಣ್ಣು ಮಗು ಜನಿಸಿದ್ದು, ನಮ್ಮ ಅಜ್ಜಿ, ಮುತ್ತಜ್ಜಿಯ ಪಟ್ಟಕ್ಕೇರಿದ್ದು ಸಡಗರವನ್ನು ಮತ್ತಷ್ಟು ಹೆಚ್ಚಿಸಿತ್ತು. ಕಾರ್ಯಕ್ರಮಗಳೆಲ್ಲ ನೆರವೇರಿದ ನಂತರ ನಮ್ಮ ಮಾವ ಸತ್ಯ ನಮ್ಮ ಅಜ್ಜಿಯೊಂದಿಗೆ ಕುಟುಂಬದ ಎಲ್ಲ ಸದಸ್ಯರನ್ನೂ ಸೇರಿಸಿ ಫೋಟೊ ತೆಗೆಸೋಣವೆಂದು ಹರಸಾಹಸ ನಡೆಸಿದ್ದರೂ ಯಾರೊಬ್ಬರೂ ಅವರ ಮಾತನ್ನು ಕೇಳಿಸಿಕೊಳ್ಳಲೇ ಇಲ್ಲ. ಕೂಡಲೇ ಅವರು ನಮ್ಮ ಅಜ್ಜಿಯನ್ನು ಸ್ಟೇಜ್ ಮೇಲೆ ಕೂರಿಸಿ, 'ನಮ್ಮ ಕುಟುಂಬದ 2ಜಿ, 3ಜಿ ಹಾಗೂ 4ಜಿಗಳು ಎಲ್ಲಿದ್ದರೂ ಸ್ಟೇಜ್ ಮೇಲೆ ಬಂದು 1ಜಿ ಜೊತೆಗೆ ಗ್ರೂಪ್ ಫೋಟೊಗೆ ನಿಲ್ಲಬೇಕು' ಎಂದಾಗ ಅವರ ಹಾಸ್ಯ ಚಟಾಕಿಗೆ ಅಲ್ಲಿ ಸೇರಿದವರೆಲ್ಲ ಜೋರಾಗಿ ನಗಲಾರಂಭಿಸಿದರು.

**ಸಿಂಧು ಬಿ.ಎನ್.**